Literacy for a Billion

Movie: Krishna Rukmini
Year: 1988

Song: Na Kande Ninna Madhura
Lyricist: Doddarange Gowda

ನಾ ಕಂಡೆ ನಿನ ಮಧುರ ಮಧುರ ಘಳಿಗೆಯಲಿ
ನೀ ತಂದೆ ಲಾಸ್ಯ ಪಲುಕು ಪಲುಕು ಹೆಜ್ಜೆಯಲಿ
ನಾ ಕಂಡೆ ನಿನ ಮಧುರ ಮಧುರ ಘಳಿಗೆಯಲಿ
ನೀ ತಂದೆ ಲಾಸ್ಯ ಪಲುಕು ಪಲುಕು ಹೆಜ್ಜೆಯಲಿ
ಸಂತೋಷ ಅಲೆ ಅಲೆಯಲ್ಲಿ
ಸಂಗೀತ ತೇಲಿ ತೇಲಿ
ಇನಿದಾದ ಕಡಲಿನಲ್ಲಿ
ಲೀನವಾಯ್ತು ಮೋಹನ ಮುರಳೀ
ನಾ ಕಂಡೆ ನಿನ ಮಧುರ ಮಧುರ ಘಳಿಗೆಯಲಿ
ನೀ ತಂದೆ ಲಾಸ್ಯ ಪಲುಕು ಪಲುಕು ಹೆಜ್ಜೆಯಲಿ
ನಿನ ಗೆಜ್ಜೆ ಘಲಿರೆನುವಾಗಾ
ನನ ಹೃದಯ ನುಡಿಯಿತು ರಾಗ
ನಿನ ಕಣ್ಣು ಕರೆದಿರುವಾಗಾ
ನನ ಬಯಕೆ ಪಡೆಯಿತು ಯೋಗ
ಎಲ್ಲಿ ನಿನ ಇಂಪಿನ ಕೊಳಲೊ
ಅಲ್ಲಿ ನನ ನಾಟ್ಯದ ನವಿಲೂ
ಎಲ್ಲಿ ನಿನ ಗೀತದ ಸೆಲೆಯೋ
ಅಲ್ಲಿ ನನ ಪ್ರೀತಿಯ ಹೊನಲೂ
ಜೀವ ಭಾವ ಅರಿತೂ ಬೆರೆತೂ
ರಾಸಲೀಲಾ ಬಂದ
ಜೀವ ಭಾವ ಅರಿತೂ ಬೆರೆತೂ
ರಾಸಲೀಲಾ ಬಂದ
ಗಾನ ತಾನ ಮಿಂದೂ ನಲಿದೂ
ಆತ್ಮಾನುಬಂಧ

ನಾ ಕಂಡೆ ನಿನ ಮಧುರ ಮಧುರ ಘಳಿಗೆಯಲಿ
ನೀ ತಂದೆ ಲಾಸ್ಯ ಪಲುಕು ಪಲುಕು ಹೆಜ್ಜೆಯಲಿ
ಯಾವ ಜನುಮ ಜನುಮದ ನಂಟೋ
ನನ ನಿನ ಮೈತ್ರಿಯ ತಂತು
ನಮ್ಮ ನಲ್ಮೆ ಭಾಗ್ಯದ ಬೆಳಕು
ಪ್ರೀತಿಯಾಗಿ ಹರಿಯುತ ಬಂತು
ನಿನ ರೂಪು ಸೆಳೆದಿರುವಾಗ
ನೂರು ರೀತಿ ರಂಗಿನ ಭೋಗ
ನಿನ ಸನಿಹ ಹಿತವಿರುವಾಗ
ನನ ಆಸೆ ಬಯಸಿತು ಸಂಗ
ಮಾತು ಮೌನ ಮೀರಿ ಬೆಳೆದ
ಪ್ರೇಮದಾಟ ಚೆಂದ
ಮಾತು ಮೌನ ಮೀರಿ ಬೆಳೆದ
ಪ್ರೇಮದಾಟ ಚೆಂದ
ಮೋಹ ದಾಹ ಮೀಟಿ ಪಡೆದ
ಸ್ವರ್ಗ ಸುಖವೇ ಚೆಂದಾ
ನಾ ಕಂಡೆ ನಿನ ಮಧುರ ಮಧುರ ಘಳಿಗೆಯಲಿ
ನೀ ತಂದೆ ಲಾಸ್ಯ ಪಲುಕು ಪಲುಕು ಹೆಜ್ಜೆಯಲಿ
ಸಂತೋಷ ಅಲೆ ಅಲೆಯಲ್ಲಿ
ಸಂಗೀತ ತೇಲಿ ತೇಲಿ
ಸಂತೋಷ ಅಲೆಅಲೆಯಲ್ಲಿ
ಸಂಗೀತ ತೇಲಿ ತೇಲಿ
ಇನಿದಾದ ಕಡಲಿನಲ್ಲಿ
ಲೀನವಾಯ್ತು ಮೋಹನ ಮುರಳಿ

ನಾ ಕಂಡೆ ನಿನ ಮಧುರ ಮಧುರ ಘಳಿಗೆಯಲಿ ಪಲುಕು ಪಲುಕು ಹೆಜ್ಜೆಯಲಿ
ನೀ ತಂದೆ ಲಾಸ್ಯ ಪಲುಕು ಪಲುಕು ಹೆಜ್ಜೆಯಲಿ ಪಲುಕು ಪಲುಕು ಹೆಜ್ಜೆಯಲೀ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.